**<u>ದಿನಾಂಕ 07-02-2025 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>: ಪಾಟೀ ಸವಾಲುಃ  ವಾದಿ ಪರ ಶ್ರೀ.ಎಫ್ ಬಿ ಎಂ ವಕೀಲರಿಂದ :</u>

**1.** ನಾನು ಬಿ ಎ ಪದವಿಧರನಾಗಿರುತ್ತೇನೆ. ದಾವಾ ಸರ್ವೆ ನಂಬರ **208** ರ ಉತ್ತರ ದಿಕ್ಕಿಗೆ ರಸ್ತೆ ಇದೆ. ಪಶ್ಚಿಮಕ್ಕೆ ನನ್ನ ಚಿಕ್ಕಪ್ಪ ಚಂದ್ರಕಾಂತ ಸತ್ಯಪ್ಪನವರ ಆಸ್ತಿ ಇದೆ. ಈ ಜಮೀನಿನ ಮೂಲ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಸರ್ವೆ ನಂಬರ **216/1** ರ ಆಸ್ತಿಯ ಮೂಲ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಈ ಎರಡು ಆಸ್ತಿಗಳು ನನ್ನ ಅಜ್ಜನ ತಂದೆ ಬಸಪ್ಪ ರವರ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ಈ  ಆಸ್ತಿಗಳು ನನ್ನ ಅಜ್ಜನಿಗೆ ಹೇಗೆ ಬಂದವು ಎಂಬುದು ನನಗೆ ಗೊತ್ತಿಲ್ಲ. ಈ ಎರಡು ಜಮೀನುಗಳು ಫಲವತ್ತಾದ ಜಮೀನುಗಳು ಆಗಿರುತ್ತವೆ. ದಾವಾ ಅನುಸೂಚಿ **1**(ಎ) ರ ಸರ್ವೆ ನಂಬರ **208** ರ ಜಮೀನು ಫಲವತ್ತಾದ ಮತ್ತು ನೀರಾವರಿ ಜಮೀನು ಆಗಿರುತ್ತದೆ. ಅದರ ನೀರಾವರಿ ಮೂಲ ಕೆರೆ ಆಗಿರುತ್ತದೆ. ಸರ್ವೆ ನಂಬರ **216/1** ರ ಜಮೀನು ನೀರಾವರಿ ಜಮೀನು ಆಗಿರುವುದಿಲ್ಲ. ನನ್ನ ಅಜ್ಜ

ಶಿವಪುತ್ರಪ್ಪನವರು ರೈತನಾಗಿದ್ದು ಆತನ ಆದಾಯ ವ್ಯವಸಾಯದಿಂದಲೇ ಇತ್ತು. ಸರ್ವೆ ನಂಬರ **2018** ಮತ್ತು ಸರ್ವೆ ನಂಬರ **216/1** ರ ಜಮೀನುಗಳು ಡ ನಂಬರ **1813** ರ ಪ್ರಕಾರ ನಮ್ಮ ಅಜ್ಜನಿಗೆ ಅವರ ತಂದೆಯಿಂದ ಬಂದತಂಹ ಆಸ್ತಿಗಳು ಎಂದರೆ ನನಗೆ ಗೊತ್ತಿಲ್ಲ. ಈ ಎರಡು ಜಮೀನಗಳ ಆದಾಯದಿಂದ ನನ್ನ ಅಜ್ಜ ಏಕತ್ರ ಗರಾಣೆ ಪರವಾಗಿ ರಿ ಸ ನಂಬರ **201/6** ರ **2** ಎಕರೆ **2** ಗುಂಟೆ ಜಮೀನನ್ನು ಖರೀದಿಸಿದರು ಎಂದರೆ ಸರಿ. ಈ ಮೇಲೆ ಹೇಳಿದ ಮೂರು ಜಮೀನುಗಳಿಂದ ಬಂದ ಆದಾಯದಿಂದ ಆತನ ಸಹೋದರರಿಂದ ಹಿಸ್ಸೆಗೆ ಬಂದ ರೈಸ್ ಮಿಲ್ ನ್ನು ಏಕತ್ರ ಗರಾಣೆ ಪರವಾಗಿ ಖರೀದಿಸಿದ್ದಾರೆ ಎಂದರೆ ಸರಿ. ಈ ಬಗ್ಗೆ ದಿನಾಂಕ **11.04.1991** ರಂದು ಖರೀದಿ ಪತ್ರ ನೋಂದಾಗಿರುತ್ತದೆ ಎಂದರೆ ಸರಿ. ನನ್ನ ಅಜ್ಜ ಶಿವಪುತ್ರಪ್ಪ ಮತ್ತು ಶಕುಂತಲಾ ರವರಿಗೆ ಜಯಲಿಂಗಪ್ಪ ಚಂದ್ರಶೇಖರ, ಶೋಭಾ, ಪ್ರಭುಲಿಂಗಪ್ಪ ಮತ್ತು ಅಶೋಕರವರು ಮಕ್ಕಳುಗಳಾಗಿರುತ್ತಾರೆ ಎಂದರೆ ಸರಿ. ನನ್ನ ಅಜ್ಜನಿಗೆ ಬಂದತಂಹ ರಿ ಸ ನಂಬರ **208, 206/1** ಮತ್ತು ಆತ ಖರೀದಿಸಿದ ರಿ ಸ ನಂಬರ **206/1** ರ ಜಮೀನು ಹಾಗೂ ರೈಸ್ ಮಿಲ್ ಗಳನ್ನು ಒಟ್ಟು ಕುಟುಂಬದ ಪರವಾಗಿಯೇ ನನ್ನ ಅಜ್ಜ ಮರಣ ಹೊಂದುವವರೆಗೆ ಏಕತ್ರ ಗರಾಣೆಯ ಸದಸ್ಯರು ವಹಿವಾಟು ಮಾಡುತ್ತಾ ಬಂದಿದ್ದರು ಎಂದರೆ ಸರಿ.

**1.** ನಾನು **1** ರಿಂದ **7** ನೇ ತರವತಿಯವರೆಗೆ ಬೆಳಗಾಲಪೇಟೆ, **8** ರಿಂದ **10** ನೇ ತರಗತಿಯವರೆಗೆ ಹಾನಗಲ್, **10** ರಿಂದ ಪದವಿಯವರೆಗೆ ಗದಗನಲ್ಲಿ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು ನನ್ನ ತಾಯಿ ಲಕ್ಷ್ಮೇಶ್ವರದಲ್ಲಿ ವಾಸವಾಗಿದ್ದವು ನನ್ನ ಸಹೋದರಿಯವರು ಬೇರೆ ದೇಶಗಳಲ್ಲಿ ವಾಸವಾಗಿರುತ್ತಾರೆ. ನಾನು ಮತ್ತು ನನ ತಾಯಿ **1999** ರಿಂದಲೂ ಸಹ ಲಕ್ಷ್ಮೇಶ್ವರದಲ್ಲಿ ವಾಸವಾಗಿರುತೇವೆ. **1999** ಕ್ಕಿಂತ ಮೊದಲು ನನ್ನ ಆಧಾರ ಕಾಡ್ ಪಾನ್ ಕಾರ್ಡ ಮತ್ತು ಮತದಾರರ ಗುರಿತಿನ ಚೀಟಿ ಹಾಗೂ ಪಡಿತರ ಚೀಟಿ ಬೆಳಗಾಲಪೇಟೆಯಲ್ಲಿದ್ದು ಆ ನಂತರ ಲಕ್ಷ್ಮೇಶ್ವರದಲ್ಲಿ ಇದೆ. **1993** ರಲ್ಲಿ ನಾನು **6** ನ ನೇ ತರಗತಿ ವಿದ್ಯಾಬ್ಯಾಸ ಮಾಡುತ್ತಿದ್ದೇನು. ನಮ್ಮ ಕುಟುಂಬಕ್ಕೆ ಸಂಬಧಪಟ್ಟ ವಾಟ್ನ ಪತ್ರವನ್ನು ಯಾರು ಬರೆದರು ಎಂಬುದು ನನಗೆ ಗೊತ್ತಿಲ್ಲ ಆದರೆ ನನ್ನ ತಂದೆಯವರು ಪಂಚಾಯತಿಯಲ್ಲಿ ಬರೆದಿದ್ದರು ಎಂದು ಹೇಳಿದ್ದರು. ಆ ವಾಟ್ನಿ ಪತ್ರವನ್ನು ಎಷ್ಟು ರೂಪಾಯಿ ಮೌಲ್ಯದ ಬಾಂಡ್ ಪೇವರ್ ನಲ್ಲಿ ಬರೆದಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆ ವಾಟ್ನಿಪತ್ರವನ್ನು ಯಾರು ಹೇಳಿ ಬರೆಸಿದರು ಎಂಬುದು ನನಗೆ ಗೊತ್ತಿಲ್ಲ. ಆ

ಸಂದರ್ಭದಲ್ಲಿ ಶಿವಯ್ಯ ಹಿರೇಮಠ ರವರು ಭಾಗವಹಿಸಿದ್ದರು ಎಂಬುದನ್ನು ಹೊರತು ಪಡಿಸಿ ಬೇರೆ ಯಾರು ಇದ್ದರು ಎಂಬುದು ನನಗೆ ಗೊತ್ತಿಲ್ಲ. ಆ ವಾಟ್ನಿ ಪತ್ರಕ್ಕೆ ಯಾರು ಸಹಿ ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಆ ಹಿಸ್ಸೆ ಪತ್ರ ಅದ ನಂತರ ಎಷ್ಟು ದಿನಕ್ಕೆ ಹಿಸ್ಸೆ ಮಾಡಿಕೊಂಡರು ಎಂಬುದು ನನಗೆ ಗೊತ್ತಿಲ್ಲ.

3. ಆ ವಾಟ್ನ ಪತ್ರದ ಮೂಲ ಪ್ರತಿ ನಮ್ಮ ಬಳಿ ಇದೆ ಆ ವಾಟ್ನಿ ಪತ್ರದ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆ ವಾಟ್ನಿ ಪತ್ರದ ಆಧಾರದ ಮೇಲೆ ಖಾತಾ ಬದಲಾವಣೆ ಕೋರಿ ಯಾರು ಅರ್ಜಿ ಸಲ್ಲಸಿದ್ದರು ಎಂಬುದು ನನಗೆ ಗೊತ್ತಿಲ್ಲ. ಆ ಅರ್ಜಿಯ ಜೊತೆ ಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. ಆ ಅರ್ಜಿಯ ಜೊತೆ ವಾಟ್ನಿಪತ್ರ ಹಾಜರು ಪಡಿಸಿದ್ದರೊ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿಯು ನನ್ನ ತಂದೆ ಮತ್ತು ತಾಯಿಯವರಗೆ ಗೊತ್ತು ಎಂದು ಸ್ವತಃ ನುಡಿಯುತ್ತಾರೆ. ಆ ವಾಟ್ನಿ ಪತ್ರದ ಆಧಾರದ ಮೇಲೆ ಖಾತಾ ಬದಲಾವಣೆ ಮಾಡುವ ಸಂರ್ಭದಲ್ಲಿ ಯಾರು ಯಾರಿಗೆ ಯು ಫಾರ್ಮ ಯಾರಿಗೆ ಜಾರಿಯಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಡ ನಂಬರ **2285** ರಲ್ಲಿ ನಮೂದಿಸಲಾದ ದಾಖಲಗಳನ್ನು ವರದಿಯ ಅರ್ಜಿ ವಾಟ್ನಿ ಕಾಗದ ಮತ್ತು ಯು ಫಾರ್ಮ ಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊದರೆ ಇರುವುದಿಲ್ಲ. ಆ ವಾಟ್ನಿಯಂತೆ ನಮಗೆ ಸರ್ವೆ ನಂಬರ **208** ರಲ್ಲಿ **5** ಎಕರೆ **4** ಗುಂಟೆ, ಸರ್ವೆ ನಂಬರ **206/1** ರ **2** ಎಕರೆ **02** ಗುಂಟೆ **09** ಆಣೆ ಜಮೀನು ಒಂದು ಹಳೆ ಮನೆ ಬಂದಿದ್ದು, ಒಂದು ಹಳೆಯ ಟ್ರ್ಯಾಕ್ಟರ ಬಂದಿರುತ್ತದೆ. ಆ ಹಳೆ ಮನೆಯನ್ನು ಮಾರಾಟ ಮಾಡಿರುತ್ತೇವೆ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಚಂದ್ರಕಾಂತ ಸತ್ಯಪ್ಪನವರ ಜಂಟಿ ಹೆಸರಿನಲ್ಲಿ ಸರ್ವೆ ನಂಬರ **175** ರ **4** ಎಕರೆ **04** ಗುಂಟೆ ಜಮೀನು ಬಂದಿತ್ತು. ಈ ಮೇಲೆ ಹೇಳಿದ ಮೂರು ಜಮೀನುಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಜಮೀನುಗಳು ನಮಗೆ ಬಂದಿರುವುದಿಲ್ಲ. ಅಲ್ಲದೇ ಪ್ರತಿವಾದಿ **6** ಮತ್ತು **7** ರವರಿಗ ಮಿಲ್ ಗಳು ಬಂದಿದ್ದು ಜಮೀನುಗಳು ಬಂದಿರುವುದಿಲ್ಲ. ನನ್ನ ಚಿಕ್ಕಪ್ಪ ಚಂದ್ರಶೇಖರ ರವರು ಒಟ್ಟಾರೆ ಎಷ್ಟು ಜಮೀನು ಬಂದಿತ್ತು ಎಂಬುದು ನನಗೆ ಗೊತ್ತಿಲ್ಲ.

4. ನನ್ನ ಅಜ್ಜ ಮತ್ತು ವಾದಿ ಕೂಡಿಕೊಂಡು ತನ್ನ ಅಜ್ಜನಿಗೆ ಬಂದ **4** ಎಕರೆ ಜಮೀನನ್ನು ಬಡಿಗೇರ ಎಂಬುವವರಿಗೆ ಮಾರಾಟ ಮಾಡಿದ್ದು ಆದರೆ ಯಾವ ದಿನಾಂಕ ತಿಂಗಳು ಮತ್ತು ಇಸವಿಯಂದು ಮಾರಾಟ ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಈ ಬಗ್ಗೆ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಅದರ ದೃಢೀಕೃತ

ನಕಲನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಆ ಆಸ್ತಿಯನ್ನು ಎಷ್ಟು ಮೊತ್ತಕ್ಕೆ ಮಾರಾಟ ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ನನ್ನ ಅಜ್ಜ ಮತ್ತು ವಾದಿ ಕೂಡಿ ಶಿವಮೊಗ್ಗದಲ್ಲಿ ಆಸ್ತಿ ಹಿಡಿದಿದ್ದು ಆದರೆ ಯಾವ ಸರ್ವೆ ನಂಬರ ಆಸ್ತಿಯನ್ನು ಯಾವ ತಾರೀಖು ಮತ್ತು ತಿಂಗಳು ಹಿಡಿದಿದ್ದಾರೆಂಬುದು ನನಗೆ ಗೊತ್ತಿಲ್ಲ. ಅದೇ ರೀತಿ ಎಷ್ಟು ಮೊತ್ತಕ್ಕೆ ಖರೀದಿಗೆ ಹಿಡಿದರು ಎಂಬುದು ನನಗೆ ಗೊತ್ತಿಲ್ಲ. ವಾದಿಯ ಅತ್ತೆ ಮಾವರಿಂದ ಆ ಆಸ್ತಿಯನ್ನು ಖರೀದಿಗೆ ಹಿಡಿದಿರುತ್ತಾರೆ. ಆ ಆಸ್ತಿ ಈಗಲೂ ಸಹ ವಾದಿಯ ಹೆಸರಿನಲ್ಲಿದೆ. ಆ ಕ್ರಯ ಪತ್ರದಂತೆ ನನ್ನ ಅಜ್ಜ ಮತ್ತು ವಾದಿ ತಮ್ಮ ಹೆಸರಿಗೆ ದಾಖಲೆಯನ್ನು ಮಾಡಿಸಿಕೊಂಡಿರುತ್ತಾರೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ ತೊದರೆ ಇರುವುದಿಲ್ಲ. ಆ ಆಸ್ತಿಯನ್ನು ವಾದಿ ಯಾವ ದಾಖಲೆಯ ಆಧಾರದ ವೇಲೆ ತನ್ನ ಹೆಸರಿಗೆ ದಾಖಲೆ ಮಾಡಿಸಿಕೊಂಡರು ಎಂಬುದು ನನಗೆ ಗೊತ್ತಿಲ್ಲ. ಈಗ ತೋರುತ್ತಿರುವ ಹಾನಗಲ್ ತಹಶೀಲ್ದಾರವರು ನೀಡಲಾದ ನಮ್ಮ ಕುಟುಂಬದ ಜಮೀನುಗಳಿಗೆ ಸಂಬಂಧಪಟ್ಟ ಹಿಂಬರಹ ಆಗಿರುತ್ತದೆ ಅದನ್ನು ನಿಪಿ-47 ಎಂದು ಗುರುತಿಸಲಾಯಿತು. ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಂತೆ **1993** ರಂದು ಯಾವುದೇ ವಾಟ್ನಿ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ವಾಟ್ನಿ ಪತ್ರದ ಆಧಾರದ ಮೇಲೆ ದಾಖಲೆ ಮಾಡಿಕೊಡುವಂತೆ ಯಾರು ಸಹ ಅರ್ಜಿ ಸಲ್ಲಿಸಿರುವುದಿಲ್ಲ ಆ ವಾಟ್ನಿ ಪತ್ರವನ್ನು ಹಾಜರು ಪಡಿಸಿಲ್ಲ ಹಾಗೂ ಕಂದಾಯ ಇಲಾಖೆಯವರು ಸಂಬಂಧಪಟ್ಟ ಪಕ್ಷಗಾರರಿಗೆ ಯು ಫಾರ್ಮ ನೀಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿಯು ನನ್ನ ತಂದೆಯವರಿಗೆ ಗೊತ್ತು ಎಂದು ಸ್ವತಃ ನುಡಿಯುತ್ತಾರೆ. ಈ ಬಗ್ಗೆ ದಾಖಲೆಗಳನ್ನು ತೆಗೆಸಿ ನಾನು ನೋಡಿರುವುದಿಲ್ಲ ಈ ಬಗ್ಗೆ ಯಾವುದೇ ತೊಂದರೆ ಇರುವುದಿಲ್ಲ ಆದರೆ ಅದಕ್ಕೆ ಸಂಬಂಧಪಟ್ಟ ಡ ನ್ನು ತೆಗೆಸಿ ನೋಡಿರುತ್ತೇನೆ. ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಒಂದು ಮನಯನ್ನು ಮಾರಾಟ ಮಾಡಿದ್ದು ಅದನ್ನು ನನ್ನ ತಂದೆಯವರು ಮಾರಾಟ ಮಾಡಿರುತ್ತಾರೆ ಆದರೆ ಯಾವ ದಿನಾಂಕ ತಿಂಗಳು ಮತ್ತು ವರ್ಷ ಎಂಬುದು ನನಗೆ ಗೊತ್ತಿಲ್ಲ. ಆ ಖರೀದಿ ಪತ್ರಕ್ಕೆ ಯಾರು ಒಪ್ಪಿಗೆ ಪಡೆದರು ಮತ್ತು ಯಾರು ಸಹಿ ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಆ ಖರೀದಿಯಿಂದ ಬಂದ ಹಣವನ್ನು ಬ್ಯಾಂಕ್ ಸಾಲ ತೀರಿಸಲು ಉಪಯೋಗಿಸಿಕೊಂಡೆವು. ಆ ಬ್ಯಾಂಕ್ ಸಾಲ ಎಷ್ಟು ಹಣ ಬಾಕಿ ಇತ್ತು ಮತ್ತು ಯಾವ ವರ್ಷ ಸಾಲ ಪಡೆದ್ದರು ಎಂಬುದು ನನಗೆ ಗೊತ್ತಿಲ್ಲ. ನಾವು ಮತ್ತು ನನ್ನ ಚಿಕ್ಕಪ್ಪ ಎರಡನೇ ಪ್ರತಿವಾದಿ ಚೆನ್ನಾಗಿದ್ದೇವೆ

ಎಂದರೆ ಸಾಕ್ಷಿಯು ಎಲ್ಲರೂ ಚೆನ್ನಾಗಿದ್ದೇವೆ ಎಂದು ಸ್ವತಃ ನುಡಿಯುತ್ತಾರೆ. ಈ ಹಿಂದೆ ವಾದಿ ಮತ್ತು ನನ್ನ ಚಿಕ್ಕಪ್ಪ 2 ನೇ ಪ್ರತಿವಾದಿ ಕೂಡಿ ನಮ್ಮ ಹಾಗೂ ಇತರ ಸಹೋದರರ ವಿರುದ್ಧ ಅಸಲು ದಾವಾ ನಂಬರ 19/2013 ರಂತೆ ಪ್ರಕರಣ ದಾಖಲಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. ನನ್ನ ತಂದೆ ದಿನಾಂಕ 19.12.2012 ರಂದು ಮೃತ ಪಟ್ಟರು. ನನ್ನ ತಂದೆ ಮೃತ ಪಟ್ಟಿದ್ದ ಕಾರಣ ಆ ದಾವೆಯನ್ನು ನನ್ನ, ನನ್ನ ತಾಯಿ ಹಾಗೂ ಸಹೋದರಿಯರ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಕೈಪಿಯತ್ ಸಲ್ಲಿಸಿದ್ದೇವೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 2 ರ (ಎ) ಯಿಂದ (ಈ) ವರೆಗಿನ ಆಸ್ತಿಗಳು ಈ ಹಿಂದೆಅ ಖಂಡವಾಗಿದ್ದವು ಎಂದರೆ ಸರಿ. ಸಾಕ್ಷಿಯು ನನ್ನ ತಂದೆಯವರಿಗೆ ಗೊತ್ತು ಎಂದು ಸ್ವತಃ ನುಡಿಯುತ್ತಾರೆ. ಈ ಆಸ್ತಿ ಈ ಹಿಂದೆ ನನ್ನ ಅಜ್ಜ ಮತ್ತು ಆತನ ಸಹೋದರರ ಹೆಸರಿನಲ್ಲಿ ಕೂಡಿಯೇ ಇತ್ತು. ಈ ಆಸ್ತಿ ನನ್ನ ತಂದೆಯ ಹೆಸರಿನಲ್ಲಿಯು ಸಹ ಇತ್ತು. ಈ ಆಸ್ತಿಯನ್ನು ನಾವು ಮಾರಾಟ ಮಾಡಿರುವುದಿಲ್ಲ.

( ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್